# ಸೈಬರ್ ವಾರ್

‘2017 ಸೆಪ್ಟೆಂಬರ್ 23ರಂದು ಈ ಜಗತ್ತು ಕೊನೆಯಾಗುತ್ತದೆ!’

ಡೇವಿಡ್ ಮೀಡೆ ಎಂಬ ವ್ಯಕ್ತಿ ಜಾಲತಾಣದಲ್ಲಿ ಪ್ರಕಟಿಸಿದ ಈ ಸಾಲುಗಳನ್ನು ನೋಡಿ ಜಗತ್ತೇ ಒಮ್ಮೆ ತಲ್ಲಣಿಸಿತ್ತು. ಸಂಖ್ಯಾಶಾಸ್ತ್ರಜ್ಞ ಮತ್ತು ಲೇಖಕನಾಗಿ ಜನಪ್ರಿಯನಾಗಿದ್ದ ಮೀಡೆಯ ಮಾತನ್ನು ನಂಬಿ, ಸತ್ತರೆ ಕುಟುಂಬ ಸಮೇತ ಸಾಯೋಣ ಎಂದು ಎಲ್ಲೋ ದೂರದಲ್ಲಿದ್ದ ಮಕ್ಕಳನ್ನು ಮನೆಗೆ ಕರೆಸಿಕೊಂಡವರಿದ್ದರು. ತಮ್ಮ ಕೊನೆಯಾಸೆಗಳನ್ನು ತೀರಿಸಿಕೊಳ್ಳಲು ಮುಗಿಬಿದ್ದವರಿದ್ದರು. ಸಾವಿನ ದಿನವನ್ನು ಕಲ್ಪಿಸಿಕೊಂಡು ನಡುಗುತ್ತ ಚಳಿಜ್ವರ ಬರಿಸಿಕೊಂಡವರಿದ್ದರು. ಜನರ ಈ ಸಾವಿನ ಭಯವನ್ನು ನೋಡಿ ಅಳುಕಿತೋ ಎಂಬಂತೆ ಪ್ರಳಯ ಮಂಗಮಾಯವಾಯಿತು.

ಪ್ರಳಯವೇನೊ ಮುಂದಕ್ಕೆ ಹೋಯಿತು. ಆದರೆ ಜಗದ ಅಂತ್ಯದ ಕುರಿತು ಕೇಳಿಬರುತ್ತಿದ್ದ ಭವಿಷ್ಯವಾಣಿಗಳು ನಿಲ್ಲಲಿಲ್ಲ. ಜೀನ್ ಡಿಕ್ಸನ್ ಎಂಬ ಅಮೆರಿಕದ ಚಿಂತಕ 2020ರಲ್ಲಿ ಭೀಕರ ಯುದ್ಧವೊಂದು ಸಂಭವಿಸುತ್ತದೆ, ಆ ಯುದ್ಧದಲ್ಲಿ ಜೀವಜಗತ್ತು ಅಂತ್ಯವಾಗುತ್ತದೆ ಎಂದು ಹೇಳಿದ್ದ. 2026ರಲ್ಲಿ ಕ್ಷುದ್ರ ಗ್ರಹಗಳ ದಾಳಿಯಿಂದ ಜಗತ್ತು ಸರ್ವನಾಶವಾಗುತ್ತದೆ ಎಂದು ‘ಮೆಸ್ಐ ಫೌಂಡೇಶನ್ ಇಂಟರ್ ನ್ಯಾಷನಲ್’ ಎಂಬ ಸಂಸ್ಥೆ ಹೇಳಿದೆ. ಇಂಥ ಹೇಳಿಕೆಗಳಿಗೆ ಮುನ್ನ ಹಾಗೂ ನಂತರ ವಿಶ್ವ ಮಹಾಯುದ್ಧಗಳನ್ನು ಕಂಡಿದೆ. ಜಗತ್ತು ನಾಶವಾಗಿಬಿಡುತ್ತದೆ ಎಂಬ ಭಯದಿಂದಲೇ ಹೊಸ ಹೊಸ ಆವಿಷ್ಕಾರಗಳು, ಅಂತರರಾಷ್ಟ್ರೀಯ ಒಪ್ಪಂದಗಳು ನಡೆದಿವೆ. ಆಧುನಿಕ ತಂತ್ರಜ್ಞಾನದ ಮೂಲಕ ಜಗತ್ತಿನ ಅಂತ್ಯವನ್ನು ತಡೆಯಲು ಸಿದ್ಧತೆ ಮಾಡಿಕೊಂಡಿದ್ದೇವೆ.

ಅಷ್ಟಕ್ಕೂ ಯುದ್ಧವಾದರೆ, ಜಗತ್ತನ್ನು ನಿಮಿಷಗಳಲ್ಲಿ ಸ್ಮಶಾನಬೂದಿಯಾಗಿಸುವಷ್ಟು ಅಣ್ವಸ್ತ್ರಗಳನ್ನು ಹಲವು ದೇಶಗಳು ಸೆರಗಲ್ಲಿ ಇಟ್ಟುಕೊಂಡಿವೆ. ಕ್ಷಣದಲ್ಲಿ ಕೊಲ್ಲುವ ಬಾಂಬುಗಳಿವೆ. ನೀರಿನ ಒಳಗೂ ಹೊರಗೂ, ಭೂಮಿಯ ಮೇಲೂ, ಆಕಾಶದಲ್ಲೂ ಯುದ್ಧ ಮಾಡುವ ತಂತ್ರಜ್ಞಾನ ಕಂಡುಹಿಡಿದಿದ್ದೇವೆ. ಆಕಾಶದಲ್ಲಿ ಬ್ಯಾಹ್ಯಾಕಾಶ ಕೇಂದ್ರ ಸ್ಥಾಪಿಸಿ ಖಗೋಳಕ್ರಾಂತಿ ಮಾಡಿದ್ದೇವೆ. ಕ್ಷುದ್ರ ಗ್ರಹಗಳೆಲ್ಲ ಯಾವ ಲೆಕ್ಕ ಎಂದು ಮೂಗು ಮುರಿದು ಮಂಗಳನ ಅಂಗಳಕ್ಕೇ ಲಗ್ಗೆಯಿಟ್ಟಾಗಿದೆ. ಭೂಮಿ ಬೋರಾಗಿದೆ ಎಂದು ಚಂದ್ರನ ಮೇಲೆ ಹನಿಮೂನ್ ನಡೆಸಲು ಟಿಕೆಟ್ ಕಾದಿರಿಸಿ ಕೂತಿದ್ದೇವೆ.

‘ಈಗ ದೊಡ್ಡ ಯುದ್ಧವಾದರೆ ಇಡೀ ಜಗತ್ತೇ ನಾಶವಾಗುತ್ತದೆ ಎಂದು ಎಲ್ಲರಿಗೂ ಗೊತ್ತು. ಹಾಗಾಗಿ ಯಾರೂ ಯುದ್ಧಕ್ಕೆ ಮುಂದಾಗುವುದಿಲ್ಲ. ಮತ್ತೊಂದು ಮಹಾಯುದ್ಧ ಭೂಮಿಯ ಮೇಲೆ ನಡೆಯುವುದಿಲ್ಲ. ನಡೆದರೆ ಭೂಮಿ ಉಳಿಯುವುದಿಲ್ಲ’ ಎಂದೆಲ್ಲ ವ್ಯಾಖ್ಯಾನಗಳನ್ನು ಕೊಟ್ಟುಕೊಳ್ಳುತ್ತ ಶಾಂತಿಯ ಬಾವುಟಕ್ಕೆ ಇಸ್ತ್ರಿಮಾಡಿ ಗಾಳಿಗೆ ಹಿಡಿಯುತ್ತಿದ್ದೇವೆ.

ನಿಜ. ಇನ್ನು ಮುಂದೆ ಮುಖಾಮುಖಿ ನಿಂತು ರಣರಂಗದಲ್ಲಿ ಕಾದುವ ಹಿಂದಿನ ವಿಶ್ವಯುದ್ಧ ಮಾದರಿಯ ಯುದ್ಧಗಳು ಘಟಿಸದೆಯೇ ಇರಬಹುದು. ಆದರೆ ಈ ಭೌತಿಕ ಯುದ್ಧಗಳ ಸೂಚನೆ ಹಿಂಗುತ್ತಿರುವಾಗಲೇ, ಕಣ್ಣಿಗೆ ಕಾಣದ ಮಾಯಾಲೋಕವೊಂದು ಯುದ್ಧರಂಗವಾಗಿ ಬದಲಾಗುತ್ತಿದೆ. ಅಲ್ಲಿ ಯಾರೂ ಎದುರು ಬದುರು ನಿಂತು ಹೋರಾಡುವುದಿಲ್ಲ. ಅಣ್ವಸ್ತ್ರಗಳಿಲ್ಲ, ಸೈನಿಕರಿಲ್ಲ, ಗುಂಡು ಮದ್ದುಗಳ ಸದ್ದು ಗದ್ದಲವಿಲ್ಲ. ಸಬ್ ಮರೀನ್‌ಗಳ ಚಮತ್ಕಾರವಿಲ್ಲ. ಜೆಟ್ ವಿಮಾನಗಳ ಹಾರಾಟವಿಲ್ಲ. ತೊಡೆಯ ಮೇಲೆ ಕೂತ ಲ್ಯಾಪ್‌ಟಾಪ್ ಎಂಬ ಪುಟ್ಟ ಪೆಟ್ಟಿಗೆಯ ಕೀಬೋರ್ಡ್‌ನಲ್ಲಿಯೇ ಘಟಿಸಿ ಜಗತ್ತನ್ನೆ ಅಲ್ಲಾಡಿಸಿಬಿಡುವ ವಿಕ್ಷಿಪ್ತ ಯುದ್ಧವಿದು. ತಂತ್ರಜ್ಞಾನವನ್ನೇ ಉಪಯೋಗಿಸಿ ಎಲ್ಲೋ ಅಜ್ಞಾತವಾಗಿ ಕೂತು ಕ್ಷಣಾರ್ಧದಲ್ಲಿ ಜಗತ್ತಿನ ಇನ್ನೊಂದು ಮೂಲೆಯಲ್ಲಿನ ದೊಡ್ಡ ವ್ಯವಸ್ಥೆಯ ಬೆನ್ನೆಲುಬನ್ನೇ ಮುರಿದು, ಮುಗ್ಗರಿಸಿ ಬೀಳುವ ಹಾಗೆ ಮಾಡುವ ತಣ್ಣನೆಯ ಯುದ್ಧವಿದು.

ಅದು ಸೈಬರ್ ಯುದ್ಧ!

***

ನಮ್ಮ ಬದುಕು ಪ್ರಸ್ತುತ ತಂತ್ರಜ್ಞಾನದ ಮೇಲೆ ನಿಂತಿದೆ. ಕೂತರೆ ಮೊಬೈಲ್ ಬೇಕು. ನಿಂತರೆ ಮೊಬೈಲ್, ಮಲಗುವಾಗ ಮೊಬೈಲ್, ಟಾಯ್ಲೆಟ್‌ಗೆ ಹೋಗುವಾಗಲೂ ಮೊಬೈಲ್! ಬಗೆಬಗೆಯ ಸಿದ್ಧ ಆಹಾರ, ಬಟ್ಟೆ, ಮನೆಗೆ ಬೇಕಾದ ಸಾಮಾನು ಎಲ್ಲವನ್ನೂ ಆನ್‌ಲೈನ್‌ನಲ್ಲೇ ಕೊಂಡುಕೊಳ್ಳುತ್ತಿದ್ದೇವೆ. ನಮಗೆ ಬೇಕಾದ ಮನರಂಜನೆ ಅಂತರ್ಜಾಲದಲ್ಲಿ ಸಿಗುತ್ತದೆ. ಬ್ಯಾಂಕ್ ಕೆಲಸಗಳು ಬೆರಳಂಚಿನಲ್ಲಿ ಮುಗಿಯುತ್ತವೆ. ಮನೆ ಕೆಲಸಕ್ಕೆ ಬೇಕಾದವರು ಇಲ್ಲೇ ಸಿಗುತ್ತಾರೆ. ಅಷ್ಟೇ ಅಲ್ಲ, ನಮ್ಮ ಆರೋಗ್ಯದ ಕಾಳಜಿವಹಿಸುವ ಅಪ್ಲಿಕೇಶನ್, ಯಾವ ಸಮಯಕ್ಕೆ ನಾವು ಏನು ತಿನ್ನಬೇಕು ಎಲ್ಲಿಗೆ ಹೋಗಬೇಕು, ಯಾರ ಜೊತೆ ಮಾತನಾಡಬೇಕು ಎಂದೂ ತಿಳಿಸುತ್ತವೆ. ಈ ಎಲ್ಲ ಮೈಲುಗಲ್ಲುಗಳನ್ನೂ ದಾಟಿ, ಬದುಕಿಗೆ ಬೇಕಾದ ಸಂಗಾತಿಯನ್ನು ನಾವು ಅಂತರ್ಜಾಲದಲ್ಲಿಯೇ ಹುಡುಕಿಕೊಳ್ಳುತ್ತಿದ್ದೇವೆ. ಬ್ಯಾಂಕ್, ಆಸ್ಪತ್ರೆ, ಆಡಳಿತ ಎಲ್ಲಾ ಕಡೆ ಕಂಪ್ಯೂಟರ್‌ಗಳ ಮೂಲಕವೇ ಕೆಲಸ ನಡೆಯುತ್ತವೆ.ಮನುಷ್ಯನ ದೇಹದಲ್ಲಿಯೇ ಚಿಪ್ಪುಗಳನ್ನು ಅಳವಡಿಸುವ ತಂತ್ರಜ್ಞಾನ ಅನತಿ

